ಅವರಿಗೆ ಪ್ರೋತ್ಸಾಹ ನೀಡುವ ಕೆಲಸವನ್ನು ಸರ್ಕಾರ ಮಾಡುತ್ತಿದೆ. ಆದರೆ ಮಾನ್ಯ ಸದಸ್ಯರ ಸಮಸ್ಯೆ ಏನೆಂದರೆ ಈ ಹುಡುಗರು ದುಡ್ಡನ್ನು ತೆಗೆದುಕೊಂಡು ಸರಿಯಾಗಿ ಉದ್ಯೋಗ ಮಾಡದೇ ಮತ್ತೆ ಲ್ಲಾದರೂ ಕೆಲಸ ಹುಡುಕುತ್ತಾರೆಂದು ಹೇಳುತ್ತಿದ್ದಾರೆ. ಇದನ್ನು ತಪ್ಪಿಸಬೇಕು. ಇದನ್ನು ನಾನು ಒಪ್ಪುತ್ತೇನೆ. ಇಂತಹ ಕೆಲವು ಘಟನೆಗಳು ನಮ್ಮ ಗಮನಕ್ಕೆ ಬಂದಿವೆ. ಕೊಟ್ಟ ಹಣವನ್ನು ಉದ್ಯಮದಲ್ಲಿ ತೊಡಗಿಸುವುದನ್ನು ಬಿಟ್ಟು ಆ ಹಣವನ್ನು ಬೇರೆ ರೀತಿಯಲ್ಲಿ ಕೆಲವರು ದುರುಪಯೋಗ ಮಾಡಿಕೊಂಡಿದ್ದಾರೆ. ಅವರ ಮೇಲೆ ಆಕ್ಷನ್ ತೆಗೆದುಕೊಳ್ಳುವುದು ಎಂದರೆ, ಅವರಿಂದ ರಿಕವರಿ ಮಾಡಬಹುದು, ನೋಟೀಸ್ ಕೊಡಬಹುದು. ಉದ್ಯೋಗಸ್ಥರಾಗತಕ್ಕ ಮನೋಭೂಮಿಕೆ ಅವರಲ್ಲಿ ಬರುವುದಕ್ಕೆ ಏನು ಮಾಡಬೇಕು ? ಅದು ಬಹಳ ಕಷ್ಟ ಇದೆ. ಇದನ್ನು ಇಲಾಖೆಯಿಂದ ಮಾಡಿದರೆ ಸಾಲದು. ಇದರಲ್ಲಿ ಹಂಡುಗರ ಆ್ಯಟಿಟ್ಯೂಡ್ ಬದಲಾವಣೆ ಆಗಬೇಕು. ಇದರ ಬಗ್ಗೆ ಮಾನ್ಯ ಸದಸ್ಯರು ಸಲಹೆ ಕೊಟ್ಟರೆ ನಮ್ಮ ಅಧಿಕಾರಿಗಳ ಜೊತೆ ಕೂತು ಚರ್ಚಿಸಲಿ. ಅವರ ಸಲಹೆಗಳನ್ನು ಜಾರಿಗೆ ತರುವುದಕ್ಕೆ ಏನು ಮಾಡಬೇಕೋ ಅದನ್ನು ನಾವು ಮಾಡುತ್ತೇವೆ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ್.– ಇವತ್ತು ಹಣ ಕೊಡುವುದರಲ್ಲೇ ಅಧಿಕಾರಿಗಳು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಯಾರು ಉದ್ಯೋಗವನ್ನು ಬಯಸಿ ಬರುತ್ತಾರೋ ಅವರಿಗೆ ಹಣ ಸಿಗುವುದಿಲ್ಲ. ಇವತ್ತು ದುರುಪಯೋಗ ಮಾಡಿಕೊಳ್ಳುವವರಿಗೇ ಹಣ ಸಿಗುತ್ತಾ ಇದೆ. ಇದರಿಂದ ಭ್ರಷ್ಟಾಚಾರ ಹೆಚ್ಚು ಆಗುತ್ತಿದೆ. ಈ ಬಗ್ಗೆ ಮಾನ್ಯ ಮಂತ್ರಿಗಳು ಗಮನಹರಿಸಬೇಕೆಂದು ಹೇಳುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್.—ಯಾರು ಉದ್ಯೋಗ ಬಯಸಿ ಬರುತ್ತಾರೋ ಅವರಿಗೆ ಸಹಾಯ ಮಾಡದೇ ಬೇರೆಯವರ ಜೊತೆ ಶಾಮೀಲಾಗಿ ಭ್ರಷ್ಟಾಚಾರದಲ್ಲಿ ತೊಡಗಿರುವ ಅಧಿಕಾರಿಗಳು ಯಾರೇ ಇದ್ದರೂ ಅವರ ಮೇಲೆ ಕಾನೂನು ರೀತಿ ಕ್ರಮ ತೆಗೆದುಕೊಂಡು ಶಿಕ್ಷೆಯನ್ನು ಕೊಡುವುದಕ್ಕೆ ನಾವು ಹಿಂದೆ ಮುಂದೆ ನೋಡುವುದಿಲ್ಲ.

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು.

೧೯೨೨. ಶ್ರೀ ವೀರಕುಮಾರ್ ಎ. ಪಾಟೀಲ್ (ನಿಪ್ಪಾಣಿ).——ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್, ಬಕ್ಫ್ ಮತ್ತು ಪಶು ಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಎ) ಪ್ರತಿಯೊಂದು ಮಂಡಲ ಪಂಚಾಯಿತಿಯು ಒಂದು ಪಶು ವೈದ್ಯ ಶಾಲೆಯನ್ನು ಹೊಂದುವುದೆಂದು ಮಂಡಲ ಪಂಚಾತಿಯ ಚುನಾವಣಾ ಸಮಯದಲ್ಲಿ ಸರ್ಕಾರವು ಪ್ರಕಟಿಸಿರುವುದು ನಿಜವೇ ?

ಬಿ) ಹಾಗಿದ್ದಲ್ಲಿ ೧೯೮೬-೮೭ ನೇ ಸಾಲಿನಲ್ಲಿ ೧೯೮೭-೮೮ನೇ ಸಾಲಿನಲ್ಲಿ ಚಿಕ್ಕೋಡಿ ತಾಲ್ಲೂಕಿಗೆ ಮಂಜೂರಾದ ಪಶುವೈದ್ಯ ಶಾಲೆಗಳ ಸಂಖ್ಯೆ ಎಷ್ಟು ? (ವಿವರಗಳನ್ನೊದಗಿಸುವುದು)

ಶ್ರೀ ಮಹಮ್ಮದ್ ಮೊಯಿನುದ್ದೀನ್ (ಪಸತಿ ಹಾಗೂ ಪಶು ಸಂಗೋಪನೆ ಮತ್ತು ಪಶುವೈದ್ಯ ಸೇವೆಗಳ ಸಚಿವರು).—

ಎ) ಇಲ್ಲ.

ಬಿ) ಉದ್ಭವಿಸುವುದಿಲ್ಲ.